ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಹಾಗೂ ಸಾರ್ವಜನಿಕ ದೂರು ರಾಜ್ಯ ಸಚಿವರು) :

ಅ) 1. ಸಿಆಸುಇ ಮತ್ತು ಮುಖ್ಯಮಂತ್ರಿಗಳಿಂದ 43943 ಅರ್ಜಿಗಳನ್ನು ಸ್ವೀಕರಿಸಲಾಗಿದೆ.

2. ಜಿಲ್ಲಾಧಿಕಾರಿಗಳ ಕಛೇರಿ - ಪಟ್ಟಿ ಲಗತ್ತಿಸಿದೆ

ಆ) 1. ಸಿಆಸುಇ ಮತ್ತು ಮುಖ್ಯಮಂತ್ರಿ ಕಾರ್ಯಾಲಯ

ಸೂಕ್ತ ಕ್ರಮಕ್ಕಾಗಿ ಕಳುಹಿಸಿದ ಅರ್ಜಿಗಳ ಸಂಖ್ಯೆ - 24909 ಅರ್ಜಿಗಳು.

ತಿರಸ್ಕೃತವಾದ ಅರ್ಜಿಗಳ ಸಂಖ್ಯೆ - 17156 ಅರ್ಜಿಗಳು.

2. ಜಿಲ್ಲಾಧಿಕಾರಿಗಳ ಕಛೇರಿ - ಪಟ್ಟಿ ಲಗತ್ತಿಸಿದೆ.

ಇ) 1. ಸಿಆಸುಇ ಮತ್ತು ಮುಖ್ಯಮಂತ್ರಿಗಳ ಕಾರ್ಯಾಲಯ - 24909

2. ಜಿಲ್ಲಾಧಿಕಾರಿಗಳ ಕಛೇರಿ - ಪಟ್ಟಿ ಲಗತ್ತಿಸಿದೆ.

ಈ) 1. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ - 1622

2. ಜಿಲ್ಲಾಧಿಕಾರಿಗಳ ಕಛೇರಿ - ಪಟ್ಟಿ ಲಗತ್ತಿಸಿದೆ.

ಉ) ಸಾರ್ವಜನಿಕ ಕುಂದುಕೊರತೆಗಳ ನಿವಾರಣಾ ಕಾರ್ಯ ವಿಧಾನದಂತೆ (ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 21 ಎಎಂಸಿ 83, ದಿನಾಂಕ 1-7-83) 15ರಿಂದ 30 ದಿನಗಳು.

ಊ) 101.

ಋ) ಸಂಬಂಧಿಸಿದ ಇಲಾಖೆಗಳಿಂದ ವರದಿ ಬರಬೇಕಿದೆ.

ಋಋ) ಇಲ್ಲ.

ಸಧ್ಯದ ಪದ್ಧತಿಯನ್ನೇ ಮುಂದುವರಿಸಲಾಗುತ್ತಿದೆ.

ವಿಷಯ : ರಾಜ್ಯದಲ್ಲಿ ಕಾನೂನು ಬಾಹಿರವಾಗಿ ಮದ್ಯದ ಅಂಗಡಿ ನಡೆಸುತ್ತಿರುವುದರ ಬಗ್ಗೆ.

Q : 874

ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಾನೂನು ಬಾಹಿರವಾಗಿ ಶಾಲಾ ಕಾಲೇಜು, ಹರಿಜನ ಕಾಲೋನಿ, ಮಸೀದಿ ಮತ್ತು ದೇವಸ್ಥಾನಗಳ ಹತ್ತಿರ ಮದ್ಯದ ಅಂಗಡಿಗಳನ್ನು ನಡೆಸಲು ಕೊಟ್ಟಿರುವ ಪರವಾನಿಗಿಗಳೆಷ್ಟು?

ಆ) ಸದರಿ ಅಂಗಡಿಗಳನ್ನು ರದ್ದುಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ಒಟ್ಟು 194 ಮದ್ಯದ ಅಂಗಡಿಗಳು ಮತ್ತು 92 ಸಾರಾಯಿ ಅಂಗಡಿಗಳು ಕಂಡು ಬಂದಿರುತ್ತದೆ.

ಆ) ಮದ್ಯದ ಅಂಗಡಿಗಳನ್ನು ಆಕ್ಷೇಪಣಾ ರಹಿತಸ್ಥಳಗಳಿಗೆ ಸ್ಥಳಾಂತರಿಸುವಂತೆ ಕ್ರಮ ಕೈಗೊಳ್ಳಲಾಗಿದೆ ಹಾಗೂ ಇಂತಹ ಅಂಗಡಿಗಳು ಸ್ಥಳಾಂತರವಾಗದಿದ್ದಲ್ಲಿ ಅಂಗಡಿಯನ್ನು ಮುಚ್ಚಲು ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು ಹಾಗೂ ಇಂತಹ ಸಾರಾಯಿ ಅಂಗಡಿಗಳನ್ನು 1993-94ನೇ ಸಾಲಿನ ಅಬಕಾರಿ ಹರಾಜು ಮಾಡುವ ಅಂಗಡಿಗಳ ಪಟ್ಟಿಯಿಂದ ತೆಗೆದು ಹಾಕಲು ಕ್ರಮ ಕೈಗೊಳ್ಳಲಾಗುವುದು.

ವಿಷಯ : ಕೆ.ಎಸ್.ಆರ್.ಟಿ.ಸಿ. ಸಿಬ್ಬಂದಿಗೆ ಫ್ರೀಬಸ್ ಪಾಸ್ ಬಗ್ಗೆ.

Q : 1587

ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ ಎಷ್ಟು?

ಆ) ಸಾರಿಗೆ ಸಂಸ್ಥೆಯ ನೌಕರರಿಗೆ ಮತ್ತು ಅವರ ಕುಟುಂಬದವರಿಗೆ ಉಚಿತ ಬಸ್‌ಪಾಸ್ ನೀಡುವರೇ?

ಇ) ಹಾಗಿದ್ದಲ್ಲಿ, ಪ್ರತಿ ವರ್ಷ ಸರಾಸರಿ ಎಷ್ಟು ಸಂಖ್ಯೆಯ ನೌಕರರು ಈ ಸೌಲಭ್ಯವನ್ನು ಪಡೆಯುವುದು ;

ಈ) ಈ ಬಗ್ಗೆ ಸಾರಿಗೆ ಸಂಸ್ಥೆಯು ಅನುಭವಿಸಿದ ಸರಾಸರಿ ನಷ್ಟ ಎಷ್ಟು?

ಉ) ಈ ನೌಕರರಿಗೆ ಉಚಿತ ಪಾಸ್ ನೀಡುವ ಬದಲು ರಿಯಾಯಿತಿ ದರದಲ್ಲಿ, ಪ್ರಯಾಣ ಮಾಡಲು ಅನುಮತಿ ನೀಡಿ ಸಾರಿಗೆ ಸಂಸ್ಥೆಯ ನಷ್ಟ ಕಡಿಮೆ ಮಾಡುವ ಪ್ರಸ್ತಾವನೆಯು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮುಂದಿದೆಯೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) 59,118
ಆ) - ಹೌದು -
ಇ) 1,19,976
ಈ) ರೂ. 1,20. ಕೋಟಿಗಳು
ಉ) - ಇಲ್ಲ -

ವಿಷಯ : ಬೆಂಗಳೂರು ನಗರದ ನಿರ್ಮಾತೃ ಕೆಂಪೇಗೌಡರ ಪ್ರತಿಮೆ ಸ್ಥಾಪನೆ ಕುರಿತು.

Q : 1904

ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದ ನಿರ್ಮಾತೃ ಕೆಂಪೇಗೌಡರ ಪ್ರತಿಮೆಯನ್ನು ಬೆಂಗಳೂರು ನಗರದ ಯಾವ ಭಾಗದಲ್ಲಿ ಸ್ಥಾಪಿಸಲಾಗಿದೆ?